**All India Radio: Bangalore**
**National Bulletin In Kannada**
**18.11.2025 1.10 p.m.**
ಆಕಾಶವಾಣಿ, ಬೆಂಗಳೂರು
ರಾಷ್ಟ್ರೀಯ ವಾರ್ತೆಗಳು
**18.11.2025 1.10 p.m.**
**<><><><>**

ಮುಖ್ಯಾಂಶಗಳು

1. ಆಂಧ್ರಪ್ರದೇಶಕ್ಕೆ ನಾಳೆ ಪ್ರಧಾನಮಂತ್ರಿ ನರೇಂದ್ರ ಮೋದಿ ಭೇಟಿ; ಪುಟ್ಟಪರ್ತಿಯಲ್ಲಿ ಸತ್ಯ ಸಾಯಿ ಬಾಬಾ ಶತಮಾನೋತ್ಸವದಲ್ಲಿ ಭಾಗಿ
2. ಮುಂದಿನ ವರ್ಷ ನವದೆಹಲಿಯಲ್ಲಿ ಜಾಗತಿಕ ದೊಡ್ಡ ಬೆಕ್ಕುಗಳ ಪ್ರಭೇದದ ಶೃಂಗಸಭೆಗೆ ಭಾರತ ಆತಿಥ್ಯ- ಕೇಂದ್ರ ಸಚಿವ ಭೂಪೇಂದರ್ ಯಾದವ್
3. ಆಂಧ್ರಪ್ರದೇಶದ ಅಲ್ಲೂರಿನಲ್ಲಿ ಮಾವೋವಾದಿಗಳೊಂದಿಗೆ ಭದ್ರತಾಪಡೆ ಗುಂಡಿನ ಚಕಮಕಿ; ಆರು ನಕ್ಸಲರು ಹತ
4. ಭಾರತದ ಸಮುದ್ರ ವಲಯದಲ್ಲಿ ಅಕ್ರಮ ಮೀನುಗಾರಿಕೆ; ಮೂರು ಬಾಂಗ್ಲಾದೇಶದ ದೋಣಿ, ೭೯ ಸಿಬ್ಬಂದಿ ವಶಕ್ಕೆ ಪಡೆದ ಕರಾವಳಿ ಕಾವಲು ಪಡೆ
5. ಎಸಿಸಿ ಪುರುಷರ ಏಷ್ಯಾಕಪ್ ರೈಸಿಂಗ್ ಸ್ಟಾರ್ಸ್ ಕ್ರಿಕೆಟ್; ಭಾರತ-ಎ ತಂಡಕ್ಕಿಂದು ಮಾಡು-ಇಲ್ಲವೆ-ಮಡಿ ಪಂದ್ಯ

<><><><>

ಪ್ರಧಾನಿ ನರೇಂದ್ರ ಮೋದಿ ನಾಳೆ ಆಂಧ್ರ ಪ್ರದೇಶಕ್ಕೆ ಒಂದು ದಿನದ ಭೇಟಿ ಕೈಗೊಳ್ಳಲಿದ್ದಾರೆ. ಈ ವೇಳೆ ಅವರು, ಪುಟ್ಟಪರ್ತಿಯಲ್ಲಿ ನಡೆಯಲಿರುವ ಭಗವಾನ್ ಶ್ರೀ ಸತ್ಯ ಸಾಯಿ ಬಾಬಾ ಅವರ ಶತಮಾನೋತ್ಸವ ಸಮಾರಂಭದಲ್ಲಿ ಪಾಲ್ಗೊಳ್ಳಲಿದ್ದಾರೆ. ಪ್ರಧಾನಿ ಸತ್ಯ ಸಾಯಿ ಬಾಬಾ ಅವರ ಪವಿತ್ರ ದೇಗುಲ ಮತ್ತು ಮಹಾ ಸಮಾಧಿ ಸ್ಥಳದಲ್ಲಿ ಪ್ರಾರ್ಥನೆ ಸಲ್ಲಿಸಲಿದ್ದಾರೆ. ಶತಮಾನೋತ್ಸವದ ಸ್ಮರಣಾರ್ಥವಾಗಿ ಸಾಯಿ ಬಾಬಾ ಅವರ ಜೀವನ, ಬೋಧನೆಗಳು ಮತ್ತು ಶಾಶ್ವತ ಪರಂಪರೆಯನ್ನು ಗೌರವಿಸುವ ಸ್ಮರಣಾರ್ಥ ನಾಣ್ಯ ಮತ್ತು ಅಂಚೆ ಚೀಟಿಗಳನ್ನು ಬಿಡುಗಡೆ ಮಾಡಲಿದ್ದಾರೆ. ಕಾರ್ಯಕ್ರಮದ ಸಂದರ್ಭದಲ್ಲಿ ಪ್ರಧಾನಿ ಸಭೆಯನ್ನುದ್ದೇಶಿಸಿ ಮಾತನಾಡಲಿದ್ದಾರೆ. ಆಂಧ್ರಪ್ರದೇಶದ ಭೇಟಿಯ ಬಳಿಕ ಪ್ರಧಾನಿ, ತಮಿಳುನಾಡಿನ ಕೊಯಮತ್ತೂರಿಗೆ ಪ್ರಯಾಣ ಬೆಳೆಸಲಿದ್ದು, ಅಲ್ಲಿ ಅವರು ದಕ್ಷಿಣ ಭಾರತ ನೈಸರ್ಗಿಕ ಕೃಷಿ ಶೃಂಗಸಭೆಯನ್ನು ಉದ್ಘಾಟಿಸಲಿದ್ದಾರೆ. ಇದೇ ವೇಳೆ ಪಿಎಂ ಕಿಸಾನ್ ಯೋಜನೆಯ ೨೧ನೇ ಕಂತನ್ನು ಬಿಡುಗಡೆಗೊಳಿಸಲಿದ್ದಾರೆ.

<><><><>

ಮುಂದಿನ ವರ್ಷ ನವದೆಹಲಿಯಲ್ಲಿ ಜಾಗತಿಕ ದೊಡ್ಡ ಬೆಕ್ಕುಗಳ ಪ್ರಭೇದದ ಶೃಂಗಸಭೆಗೆ ಭಾರತ ಆತಿಥ್ಯ ವಹಿಸಲಿದೆ ಎಂದು ಕೇಂದ್ರ ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಸಚಿವ ಭೂಪೇಂದರ್ ಯಾದವ್ ಘೋಷಿಸಿದ್ದಾರೆ. ನಿನ್ನೆ ಬ್ರೆಜಿಲ್‌ನಲ್ಲಿ ನಡೆದ ಅಂತಾರಾಷ್ಟ್ರೀಯ ದೊಡ್ಡ ಬೆಕ್ಕುಗಳ ಪ್ರಭೇದದ ಒಕ್ಕೂಟ-ಐಬಿಸಿಎ ಕುರಿತ ಉನ್ನತ ಮಟ್ಟದ ಸಚಿವರ ವಿಭಾಗವನ್ನು ಉದ್ದೇಶಿಸಿ ಮಾತನಾಡಿದ ಅವರು, ದೊಡ್ಡ ಬೆಕ್ಕುಗಳು

ಜಲಾನಯನ ರಕ್ಷಣೆ, ವಿಪತ್ತು ಅಪಾಯ ಕಡಿತ, ಹವಾಮಾನ ಹೊಂದಾಣಿಕೆ ಮತ್ತು ಸುಸ್ಥಿರ ಜೀವನೋಪಾಯವನ್ನು ನೇರವಾಗಿ ಬಲಪಡಿಸುತ್ತದೆ ಎಂದು ಹೇಳಿದ್ದಾರೆ.

<><><><>

ಆಂಧ್ರಪ್ರದೇಶದ ಅಲ್ಲೂರಿ ಸೀತಾರಾಮರಾಜು ಜಿಲ್ಲೆಯ ಮಾರೆಡೂಮಿಲ್ಲಿ ಪ್ರದೇಶದಲ್ಲಿ ಇಂದು ಭದ್ರತಾ ಪಡೆಗಳು ಮತ್ತು ಮಾವೋವಾದಿಗಳ ನಡುವೆ ನಡೆದ ಗುಂಡಿನ ಚಕಮಕಿಯಲ್ಲಿ ನಕ್ಸಲ್ ನಾಯಕ ಸೇರಿದಂತೆ ಆರು ಮಾವೋವಾದಿಗಳು ಹತರಾಗಿದ್ದಾರೆ. ಈ ಪ್ರದೇಶದಲ್ಲಿ ಭದ್ರತಾಪಡೆಗಳ ಕಾರ್ಯಾಚರಣೆಯ ಸಂದರ್ಭದಲ್ಲಿ ಬೆಳಗ್ಗೆ ೬ ರಿಂದ ೭ ಗಂಟೆಯ ನಡುವೆ ಈ ಎನ್‌ಕೌಂಟರ್ ನಡೆದಿದೆ.

<><><><>

ಭಾರತವು ೨೦೩೫ ರ ಡಿಸೆಂಬರ್ ವೇಳೆಗೆ ತನ್ನ ಪರಿ?ತ 'ರಾಷ್ಟ್ರೀಯವಾಗಿ ನಿರ್ಧರಿಸಲ್ಪಟ್ಟ ಕೊಡುಗೆ-ಎನ್‌ಡಿಸಿ'ಯನ್ನು ಪ್ರಕಟಿಸಲಿದೆ ಎಂದು ಕೇಂದ್ರ ಪರಿಸರ ಸಚಿವ ಭೂಪೇಂದರ್ ಯಾದವ್ ಅವರು ಹೇಳಿದ್ದಾರೆ. ಬ್ರೆಜಿಲ್‌ನ ಬೆಲೆಮ್‌ನಲ್ಲಿ ನಡೆಯುತ್ತಿರುವ ಯುಎನ್-ಕಾಪ್-೩೦ ಹವಾಮಾನ ಶೃಂಗಸಭೆಯ ಉನ್ನತ ಮಟ್ಟದ ವಿಭಾಗವನ್ನು ಉದ್ದೇಶಿಸಿ ಮಾತನಾಡಿದ ಅವರು, ಸುಸ್ಥಿರವಲ್ಲದ ಬೆಳವಣಿಗೆ ಮತ್ತು ಅಭಿವೃದ್ಧಿ ಮಾದರಿಗಳಿಂದಾಗಿ ಹವಾಮಾನ ಬದಲಾವಣೆಯು ನಿಜ ಮತ್ತು ಸನ್ನಿಹಿತವಾಗಿದೆ ಎಂದು ಹೇಳಿದರು. ಅಭಿವೃದ್ಧಿ ಹೊಂದಿದ ರಾ?ಗಳು ತಮ್ಮ ಪ್ರಸ್ತುತ ಸಮಯಕ್ಕಿಂತ ಮುಂಚಿತವಾಗಿ ನಿವ್ವಳ-ಶೂನ್ಯ ಗುರಿಗಳನ್ನು ಸಾಧಿಸಬೇಕೆಂದು ಸಚಿವರು ಕರೆ ನೀಡಿದ್ದಾರೆ.

**ಧ್ವನಿ: ಭೂಪೇಂದರ್ ಯಾದವ್ ( ೨೯ ಸೆಕೆಂಡ್ಸ್)**

<><><><>

ನವದೆಹಲಿಯಲ್ಲಿಂದು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಮುಂಬರುವ ೨೦೨೬-೨೭ ರ ಕೇಂದ್ರ ಆಯವ್ಯಯ ಕುರಿತಂತೆ ಬಂಡವಾಳ ಮಾರುಕಟ್ಟೆಗಳ ಪಾಲುದಾರರ ಜೊತೆಗೆ ನಾಲ್ಕನೇ ಬಜೆಟ್ ಪೂರ್ವ ಸಮಾಲೋಚನೆಯ ಅಧ್ಯಕ್ಷತೆ ವಹಿಸಿದ್ದರು. ಸಭೆಯಲ್ಲಿ ಕೇಂದ್ರ ಹಣಕಾಸು ಖಾತೆ ರಾಜ್ಯ ಸಚಿವ ಪಂಕಜ್ ಚೌಧರಿ, ಆರ್ಥಿಕ ವ್ಯವಹಾರಗಳ ಇಲಾಖೆಯ ಕಾರ್ಯದರ್ಶಿ ಮತ್ತು ಕೇಂದ್ರ ಸರ್ಕಾರದ ಪ್ರಧಾನ ಆರ್ಥಿಕ ಸಲಹೆಗಾರರು ಭಾಗವಹಿಸಿದ್ದರು.

<><><><>

ಭಾರತೀಯ ಕಡಲ ನೀರಿನಲ್ಲಿ ಅಕ್ರಮ ಮೀನುಗಾರಿಕೆ ನಡೆಸುತ್ತಿದ್ದ ಮೂರು ಬಾಂಗ್ಲಾದೇಶದ ಮೀನುಗಾರಿಕಾ ದೋಣಿಗಳನ್ನು ಮತ್ತು ೭೯ ಸಿಬ್ಬಂದಿಯನ್ನು ಭಾರತೀಯ ಕರಾವಳಿ ಕಾವಲು ಪಡೆ ವಶಪಡಿಸಿಕೊಂಡಿದೆ. ಉತ್ತರ ಬಂಗಾಳಕೊಲ್ಲಿಯಲ್ಲಿ ಎಂದಿನಂತೆ ಕಣ್ಗಾವಲು ನಡೆಸುತ್ತಿದ್ದಾಗ ಭಾರತದ ಸಮುದ್ರ ವಲಯ ಕಾಯ್ದೆಯನ್ನು ಉಲ್ಲಂಘಿಸಿ ಮೀನುಗಾರಿಕಾ ದೋಣಿಗಳು ಕಾರ್ಯ ನಿರ್ವಹಿಸುತ್ತಿದ್ದನ್ನು ಕಾವಲು ಪಡೆ ಪತ್ತೆ ಹಚ್ಚಿತು. ಬಳಿಕ ಕಾವಲಪಡೆಯ ತಂಡ ಎರಡು ದೋಣಿಗಳನ್ನು ತಡೆಹಿಡಿದು, ಸಂಪೂರ್ಣವಾಗಿ ಪರಿಶೀಲನೆ ನಡೆಸಿದೆ.

<><><><>

ಅಂತಾರಾಷ್ಟ್ರೀಯ ಗೀತಾ ಮಹೋತ್ಸವ -೨೦೨೫ರ ಸಂಭ್ರಮಾಚರಣೆಯ ಭಾಗವಾಗಿ ಭಾರತದ ರಾಯಭಾರ ಕಚೇರಿ 'ಇಂದಿನ ಜಗತ್ತಿನಲ್ಲಿ ಭಗವದ್ಗೀತೆಯ ಪ್ರಸ್ತುತತೆ' ಕುರಿತು ವಿಚಾರ ಸಂಕೀರಣ ಆಯೋಜಿಸಿತ್ತು. ನೇಪಾಳ

ಸಂಸ್ಕೃತ ವಿಶ್ವವಿದ್ಯಾಲಯ ಮತ್ತು ತ್ರಿಭುವನ್ ವಿಶ್ವವಿದ್ಯಾಲಯದ ಪ್ರಾಧ್ಯಾಪಕರು ಗೀತೆಯ ವಿವಿಧ ಆಯಾಮಗಳ ಕುರಿತು ಒಳನೋಟವುಳ್ಳ ಪ್ರಸ್ತುತಿಗಳನ್ನು ಪ್ರದರ್ಶಿಸಿದರು. ಆಧುನಿಕ ಯುಗದಲ್ಲಿ ಭಗದ್ಗೀತೆಯ ಕಾಲಾತೀತ ಜ್ಞಾನ ಮತ್ತು ಪ್ರಸ್ತುತತೆಯನ್ನು ಒತ್ತಿ ಹೇಳಲಾಯಿತು.

<><><>

ಅಲ್ ಫಲಾಹ್ ಗುಂಪಿಗೆ ಸಂಬಂಧಿಸಿದ ದೆಹಲಿ ಮತ್ತು ರಾಷ್ಟ್ರ ರಾಜಧಾನಿ ಪ್ರದೇಶದ ೨೫ಕ್ಕೂ ಹೆಚ್ಚು ಸ್ಥಳಗಳಲ್ಲಿ ಇಂದು ಜಾರಿ ನಿರ್ದೇಶನಾಲಯ ಶೋಧ ಕಾರ್ಯಾಚರಣೆ ನಡೆಸಿದೆ. ಅಕ್ರಮ ಹಣಕಾಸು ವ್ಯವಹಾರಗಳು, ಶೆಲ್ ಕಂಪನಿಗಳ ಬಳಕೆ, ವಸತಿ ಘಟಕಗಳು ಮತ್ತು ಅಕ್ರಮ ವರ್ಗಾವಣೆ ಕುರಿತು ನಡೆಯುತ್ತಿರುವ ತನಿಖೆಯ ಭಾಗವಾಗಿ ಈ ಶೋಧ ನಡೆಸಲಾಗುತ್ತಿದೆ. ವಿವಿಧ ಪ್ರಕರಣಗಳಲ್ಲಿ ಅಲ್ ಫಲಾಹ್ ಟ್ರಸ್ಟ್ ಮತ್ತು ಸಂಬಂಧಿತ ಸಂಸ್ಥೆಗಳ ಪಾತ್ರದ ಕುರಿತು ತನಿಖೆ ನಡೆಸಲಾಗುತ್ತಿದೆ.

<><><>

ನವದೆಹಲಿಯಲ್ಲಿ ನಿನ್ನೆ ನಡೆದ ಭೂವ್ಯವಸ್ಥೆ ವಿಜ್ಞಾನ ಮಂಡಳಿ- ಇಎಸ್‌ಎಸ್‌ಸಿ ಯ ಮೊದಲ ಸಾಮಾನ್ಯ ಸಭೆಯ ಅಧ್ಯಕ್ಷತೆಯನ್ನು ಕೇಂದ್ರ ಸಚಿವ ಡಾ.ಜಿತೇಂದ್ರ ಸಿಂಗ್ ವಹಿಸಿದ್ದರು. ಸಭೆಯಲ್ಲಿ ಭೂವಿಜ್ಞಾನ ಸಚಿವಾಲಯದ ಐದು ಪ್ರತ್ಯೇಕ ಸಂಸ್ಥೆಗಳನ್ನು ಒಂದೇ ಸಂಘಟಿತ ಚೌಕಟ್ಟಿನೊಳಗೆ ವಿಲೀನಗೊಳಿಸಲಾಯಿತು.

<><><>

೨೦೨೫ರಲ್ಲಿ ಅಮೆರಿಕ ಕಾಲೇಜುಗಳಲ್ಲಿ ಭಾರತೀಯ ವಿದ್ಯಾರ್ಥಿಗಳ ದಾಖಲಾತಿಯಲ್ಲಿ ಗಮನಾರ್ಹ ಕುಸಿತ ಕಂಡುಬರುತ್ತಿದೆ. ೨೦೨೪-೨೫ ರಲ್ಲಿ ಭಾರತದಿಂದ ಪದವೀಧರರ ದಾಖಲಾತಿ ಶೇಕಡ ೧೦ ರಷ್ಟು ಕಡಿಮೆಯಾಗಿದ್ದು, ಒಟ್ಟಾರೆ ಅಂತಾರಾಷ್ಟ್ರೀಯ ವಿದ್ಯಾರ್ಥಿಗಳ ಸಂಖ್ಯೆ ೨೦೨೫ರ ಕೊನೆಯ ವೇಳೆಗೆ ೧೭ ಪ್ರತಿಶತ ಕುಸಿಯುವ ನಿರೀಕ್ಷೆಯಿದೆ.

<><><>

ಧ್ವಂಸಗೊಂಡ ಪ್ರದೇಶದಲ್ಲಿ ಭದ್ರತೆಯನ್ನು ಒದಗಿಸಲು ಅಂತಾರಾಷ್ಟ್ರೀಯ ಸ್ಥಿರತಾ ಪಡೆಗೆ ಅಧಿಕಾರ ನೀಡುವ ಮತ್ತು ಸ್ವತಂತ್ರ ಪ್ಯಾಲೆಸ್ಟೈನ್ ರಾಷ್ಟ್ರಕ್ಕೆ ಭವಿಷ್ಯದ ಮಾರ್ಗವನ್ನು ಕಲ್ಪಿಸುವ, ಗಾಜಾಕ್ಕಾಗಿ ಅಮೆರಿಕದ ಯೋಜನೆಗೆ ವಿಶ್ವಸಂಸ್ಥೆಯ ಭದ್ರತಾ ಮಂಡಳಿ ನಿನ್ನೆ ರಾತ್ರಿ ಅನುಮೋದನೆ ನೀಡಿದೆ. ಮತ್ತೊಂದು ನಿರ್ಣಯವನ್ನು ಪ್ರಸ್ತಾಪಿಸಿದ್ದ ರಷ್ಯಾ, ೧೩-೦ ಮತಗಳಲ್ಲಿ ಚೀನಾದೊಂದಿಗೆ ಮತದಾನದಿಂದ ದೂರವುಳಿಯಿತು. ಇಸ್ರೇಲ್ ಮತ್ತು ಹಮಾಸ್ ನಡುವಿನ ಎರಡು ವರ್ಷಗಳ ಯುದ್ಧದ ನಂತರ ಗಾಜಾದ ಭವಿಷ್ಯವನ್ನು ರೂಪಿಸುವ ಪ್ರಯತ್ನಗಳು ಮತ್ತು ದುರ್ಬಲ ಕದನ ವಿರಾಮಕ್ಕೆ ಈ ಮತದಾನ ನಿರ್ಣಾಯಕ ಮುಂದಿನ ಹೆಜ್ಜೆಯಾಗಿತ್ತು.

<><><>

ದೋಹಾದ ವೆಸ್ಟ್ ಎಂಡ್ ಪಾರ್ಕ್ ಅಂತಾರಾಷ್ಟ್ರೀಯ ಕ್ರಿಕೆಟ್ ಕ್ರೀಡಾಂಗಣದಲ್ಲಿ ಇಂದು ನಡೆಯಲಿರುವ ಎಸಿಸಿ ಪುರುಷರ ಏಷ್ಯಾಕಪ್ ರೈಸಿಂಗ್ ಸ್ಟಾರ್ಸ್-೨೦೨೫ ರ ಗುಂಪು ಹಂತದ  ತಮ್ಮ ಕೊನೆಯ ಪಂದ್ಯದಲ್ಲಿ ಭಾರತ-ಎ ತಂಡ ಓಮನ್-ಎ ತಂಡವನ್ನು ಎದುರಿಸಲಿದೆ. ಪಂದ್ಯ ಭಾರತೀಯ ಕಾಲಮಾನ ರಾತ್ರಿ ೮ ಗಂಟೆಗೆ ಆರಂಭವಾಗಲಿದೆ. ಇದು ಭಾರತಕ್ಕೆ ಮಾಡು, ಇಲ್ಲವೆ, ಮಡಿ ಪಂದ್ಯವಾಗಿದೆ.

<><> ಇಲ್ಲಿಗೆ ವಾರ್ತಾ ಪ್ರಸಾರ ಮುಕ್ತಾಯವಾಯಿತು <><>